

# ರುಚಿಕರ ರಂಬಾಯಿ ಹಣ್ಣು

ಚಿತ್ರ ಬರಹ:
ಪ.ರಾಮಕೃಷ್ಣ ಶಾಸ್ತ್ರಿ



ಮಾಸಲು ಹಳದಿ ವರ್ಣದ ಈ ಹಣ್ಣಿನ ಹೊರಗೆ ದಪ್ಪಗಿನ ಸಿಪ್ಪೆ ಇದೆ. ಒಡೆದರೆ ಒಳಗೆ ಗುಲಾಬಿ, ಹಳದಿ ಅಥವಾ ಕಂದು ಬಣ್ಣದ ತಿರುಳು ಆವರಿಸಿರುವ ಮೂರರಿಂದ ಐದರ ವರೆಗೆ ಬೀಜಗಳಿರುತ್ತವೆ. ಬೀಜಗಳ ಸುತ್ತಲೂ ರಂಬ್ಟಾನ್ ಹಣ್ಣಿನ ಹಾಗೆ ಮೃದು ಮಧುರವಾದ ತಿರುಳಿರುತ್ತದೆ. ತುಂಬ ಸುವಾಸನೆಯಿರುವ ಸಿಹಿಯಾದ ಈ ರುಚಿಕರ ಹಣ್ಣು ಆಗ್ನೇಯ ಏಷ್ಯಾದ ಕೆಲವೆಡೆ ಕಾಡುಗಳಲ್ಲಿ ನೈಸರ್ಗಿಕವಾಗಿ ಬೆಳೆಯುತ್ತದೆ.

ಈ ಮಾಧುರ್ಯದ ಹಣ್ಣಿನ ಹೆಸರು ರಂಬಾಯಿ ಅಥವಾ ರಂಬಿ. ಸಸ್ಯಶಾಸ್ತ್ರದಲ್ಲಿ ಬಕ್ಕಾರಿಯಾ ಮೊಟ್ಲೆಯಾನಾ ಎಂದು ಇದರ ಹೆಸರು ಹಸಿರುಮಿಶ್ರಿತ ಹಳದಿ ಎಲೆಗಳ ಕೆಳಭಾಗದಲ್ಲಿ ಸೂಕ್ಷ್ಮ ರೋಮಗಳಿವೆ. ಇದರಲ್ಲಿ ಭಿನ್ನ ಲಿಂಗಿ ಗಿಡಗಳಿವೆ. ಹೆಣ್ಣು ಗಿಡದಲ್ಲಿ ಫಲ ಸಿಗಲು ಗಂಡು ಮರದ ಅಗತ್ಯವಿದ್ದರೂ, ಹಣ್ಣು ಕೊಡುವುದು ಹೆಣ್ಣು ಮರ ಮಾತ್ರ. ಹೂಗಳು ಸುಗಂಧಭರಿತವಾಗಿವೆ. ಹೂಗಳ ದಂಡು 15ರಿಂದ 75 ಸೆ. ಮೀ. ಉದ್ದವಾಗಿದ್ದು ಅದರಲ್ಲಿ ತುಂಬ ಕಾಯಿಗಳಿರುತ್ತವೆ. ಹಸಿರಾದ ಕಾಯಿ ಬಲಿತರೆ ಹಳದಿಯಾಗುವುದು. ಹಣ್ಣು ಎರಡರಿಂದ ಐದು ಸೆ. ಮೀ. ಉದ್ದವಿರುತ್ತದೆ.

ಹಣ್ಣನ್ನು ಹಾಗೆಯೇ ತಿನ್ನಬಹುದು. ಕಾಯಿಯ ರುಚಿ ತುಂಬ ಹುಳಿ. ಜಾಮ್, ಜೆಲ್ಲಿ, ಜ್ಯೂಸ್, ಉಪ್ಪಿನಕಾಯಿ, ಚಟ್ನಿ ಇದನ್ನೆಲ್ಲ ತಯಾರಿಸಬಹುದು. ಹಾಗೆಯೇ ಮದ್ಯ ತಯಾರಿಕೆಗೂ ಉಪಯುಕ್ತವಾಗಿದೆ. ಕೆಲವು ಔಷಧಿಗಳಿಗೂ ಅದನ್ನು ಬಳಸುತ್ತಾರೆ. ಹಣ್ಣಿನಲ್ಲಿ ವಿಪುಲವಾಗಿ ಸಿ ಜೀವಸತ್ವವಿದೆ. ಕಬ್ಬಿಣ, ಸುಣ್ಣ, ರಂಜಕ, ಪ್ರೋಟೀನ್ ಮುಂತಾದ ಪೋಷಕಾಂಶಗಳು ಅದರಲ್ಲಿ ಸಮೃದ್ಧವಾಗಿವೆ.

ಉಷ್ಣವಲಯದ ಹಣ್ಣಾದರೂ 28 ಡಿಗ್ರಿಗಿಂತ ಅಧಿಕ ಉಷ್ಣಾಂಶವನ್ನು ತಡೆಯುವುದಿಲ್ಲ. ಹಿಮಾಚಲ ಪ್ರದೇಶದ ಹೊರತು ಭಾರತದ ಇತರೆಡೆ ಇದನ್ನು ಬೆಳೆಸಲು ಅನಾನುಕೂಲಗಳಿವೆ. ತೇವಾಂಶವಿರುವ ನದಿ ತೀರದ ಮೆಕ್ಕಲು ಮಣ್ಣಿದ್ದರೆ ಆಗಬಹುದು. ಗಿಡ ನೆಟ್ಟು ನಾಲ್ಕು ವರ್ಷದಲ್ಲಿ ಫಸಲು ಕೊಯ್ಯಬಹುದು. ಗಿಡಕ್ಕೆ ಶೇ. 50ರಷ್ಟು ಬಿಸಿಲು ಮತ್ತು ನೆರಳು ಎರಡೂ ಬೇಕಾಗುತ್ತದೆ. ಶೀತಗಾಳಿಯನ್ನು ಸಹಿಸುವುದಿಲ್ಲ. ಮಣ್ಣಿನಲ್ಲಿ ಸುಣ್ಣದ ಅಂಶ ಹೆಚ್ಚು ಅಗತ್ಯವಿದೆ. ಚಳಿಗಾಲದಲ್ಲಿ ಹಣ್ಣುಗಳ ಸುಗ್ಗಿ. ಬಲಿತ ಮರದಿಂದ ಕ್ವಿಂಟಾಲುಗಟ್ಟಲೆ ಹಣ್ಣು ಕೊಯ್ಯಲು ಸಿಗುತ್ತದೆ.

ರಂಬಾಯಿ ಮರ ಪೀಠೋಪಕರಣಗಳ ತಯಾರಿಕೆಗೆ ಬಲು ದೃಢವಾಗಿದೆ. ಅದರ ತೊಗಟೆಯಿಂದ ಕಣ್ಣು ನೋವಿನ ಔಷಧ ತಯಾರಿಸುತ್ತಾರೆ. ತೊಗಟೆಯ ನಾರಿನಿಂದ ಹಗ್ಗ ಮತ್ತು ಬುಟ್ಟಿಗಳು ತಯಾರಾಗುತ್ತದೆ. ಅಲ್ಲದೆ ತೊಗಟೆಯಿಂದ ಟ್ಯಾನಿನ್ ಹಾಗೂ ಬೇರಿನಿಂದ ಕೆಂಪುಬಣ್ಣ ಸಿದ್ಧವಾಗುತ್ತದೆ.